


ಮಹಿಳೆಯರು ಕೋರ್ಟು ಮೆಟ್ಟಿಲು ಹತ್ತುತ್ತಾರೆ. ಇತ್ತೀಚೆಗೆ ಹೆಂಡತಿಯ ದಬ್ಬಾಳಿಕೆ, ಕಿರಿಕಿರಿಯಿಂದಲೂ ಬೇಸತ್ತು ಕೆಲವು ಗಂಡಂದಿರು ಕೋರ್ಟ್ ಮೆಟ್ಟಿಲು ಹತ್ತಿರುವ ಪ್ರಕರಣಗಳು ಉಂಟು. ಜಗಳವೆಂಬುದು ಸಂಸಾರಿಕ ಜೀವನದ ಅವಿಭಾಜ್ಯ ಅಂಗ. ತಾವು ಸಂಸಾರವಂದಿಗರಾಗಿದ್ದರೆ ಈ ಕುರಿತು ತಿಳಿದವರಾಗಿರುತ್ತೀರಿ. ಇನ್ನು ಆಗಿರದಿದ್ದರೆ ಮುಂದೆ ತಿಳಿಯುತ್ತದೆ. ತಾವು ಪ್ರೀತಿ, ಪ್ರೇಮ, ಸ್ನೇಹ ಎಂದು ಹುಡುಗ ಅಥವಾ ಹುಡುಗಿಯ ಸಹವಾಸದಲ್ಲಿ ಇದ್ದರೂ ತಮಗೆ ಸರಸ ವಿರಸದ ಅನುಭವ ಇದ್ದೇ ಇರುತ್ತದೆ. ಹಲವು ದಶಕಗಳ ಸಂಸಾರಿಕ ಅನುಭವದ ಹಿನ್ನೆಲೆಯಲ್ಲಿ ನಾನು ಗಂಡ ಹೆಂಡಿರ ಜಗಳ ಕುರಿತು ಸ್ವಲ್ಪ